4. ತಿರಸ್ಕರಿಸಲ್ಪಡುವ ದರಖಾಸ್ತುದಾರ್ರುಗಳಿಂದ ಇಡಲ್ಪಟ್ಟ ಠೇವಣಿ ಮೊಬಲಗು ವಾಪಸು ಮಾಡಲ್ಪಡುತ್ತದೆ. ದರಖಾಸ್ತುಗಳು ಡಿಪ್ಯೂಟಿ ಕಮ್ಮಿಷನರವರಿಂದ ಮಂಜೂರಾದ ಸಂಗತಿಯನ್ನು ಸದರೀ ದರಖಾಸ್ತುದಾರರಿಗೆ ತಿಳಿಸಿದ ಕೂಡ್ಲೆ ಕಂಟ್ರಾಕ್ಟಿನ ಷರತ್ತುಗಳ ಮೇರೆಗೆ ನಡೆದುಕೊಳ್ಳತಕ್ಕ ಖಾತರೀ ಬಗ್ಗ್ಯಾಗಿ ಮೊದಲು ಇಟ್ಟದ್ದ (250) ಐವತ್ತು ರೂಪಾಯಿಗಳಲ್ಲದೆ ಇನ್ನಿಸ್ತಾಯಾಗಿ (250) ಎರಡುನೂರ ಐವತ್ತು ರೂಪಾಯಿಗಳನ್ನ ಠೇವಣಿ ಇಡಬೇಕು. ಮತ್ತು ಈ ಕೆಳಗೆ ಕಂಡ ಮುಖ್ಯ ಸಂಗತಿಗಳನ್ನು ಕಂಡು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು.

(1) ದರಖಾಸ್ತಿನಲ್ಲಿ ಕಂಡ ಪ್ರದೇಶ ಶಿವಾಯಿ ಇತರ ಕಡೆಯಲ್ಲಿ ಕತರಾವಣಿ ಮಾಡುವದಿಲ್ಲ.

(2) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನೇಮಕಮಾಡಲ್ಪಡುವ ಮೇರೆಗೆ ಕ್ರಮವಾಗಿ ಬಂದು ಕಡಿಯಿಂದ ಬಿದರನ್ನ ಕಡಿಯುತ್ತೇನೆ. ಕತರಾವಣಿ ಬಗ್ಯೆ ದಫಾ ಬಂದಕ್ಕೆ ಬಂದು ನೂರು ಎಕರೆಗೆ ವಿಾರದ ತುಕಡಿಯನ್ನ ನಿರ್ಧಾರ ಮಾಡಿಸಿಕೊಂಡು ಅದರಲ್ಲಿ ಕತರಾವಣಿ ಪೂರೈಸಿದ ನಂತರ ಇನ್ನೊಂದು ತುಕಡಿಯನ್ನು ನಿರ್ಧಾರ ಮಾಡಿಸಿ ಕೊಡತಕ್ಕ ಬಗ್ಯೆ ಖಾಯಿಷ್ಮಾಡುತ್ತೇನೆ.

(3) ಪ್ರತಿ ಯೊಂದು ಪೊದೆಯಲ್ಲಿಯೂ ಹಸೀ, ಯಾ ಯಳೀ ಬಿದರುಗಳನ್ನ ನಾಲ್ಕಕ್ಕೆ ಕಮ್ಮಿ ಇಲ್ಲದೆ ಬಿಟ್ಟು ನಿಂತದ್ದನ್ನ ಭೂ ಮಟ್ಟಕ್ಕೆ ಕಡಿಯುತ್ತೇನೆ.

(4) ನಾನು ಕಡಿಯುವ ಬಿದರುಗಳ ಪೈಕಿ ಹಸೀದಾಗಲಿ, ಒಣಗಿದ್ದಾಗಲಿ ಕೆಲವು ಅದದುಗಳನ್ನ ಹಾಸಲು ಕೊಟ್ಟು ಸಾಗಿಸಿಕೊಂಡು ಹೋಗಲು ಇಚ್ಛೆಪಡದೆ ಇರುವ ಸಂದರ್ಭದಲ್ಲಿ ಅಂಥಾ ಗಳುಗಳನ್ನ ಗಾಡೀ ಸಂಚಾರಕ್ಕೆ ಅನುಕೂಲವಾದ ಪ್ರದೇಶಗಳಲ್ಲಿ ಜಮಾಯಿಸಿಕೊಡುತ್ತೇನೆ.

(5) ಹಾಸಲು ಪಾವತಿ ಮಾಡಿ ಸಾಗಿಸಿಕೊಂಡು ಹೋಗಬೇಕೆಂದು ನಾನು ಉದ್ದೇಶಿಸುವ ವಿಶಿಷ್ಟ ಗಳುಗಳನ್ನೂ, ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಜಾಗಗಳಲ್ಲಿ ಎಣಿಕೆಗೆ ಅನುಕೂಲವಾಗುವ ರೀತ್ಯಾ ಜಮಾಯಿಸಿ ಇಡುತ್ತೇನೆ.

(6) ಹೀಗೆ ನಾನು ಜಮಾಯಿಸಿ ಇಡುವ ಗಳುಗಳನ್ನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತುಮಾಡಲ್ಪಡುವ ಹುದ್ದೇದಾರ್ರು ಎಣಿಕೆ ಮಾಡಿದ ನಂತರ ನಾನು ಒಪ್ಪಿಕೊಂಡ ದರದ ಮೇರೆಗೆ ಪಾವತಿ ಮಾಡಬೇಕಾದ ಖರೀದಿ ಮೊಬಲಗನ್ನ ಲೆಟರ್ ಆಫ್ ಅಡ್ವೈಸ್, ಅಥವಾ ಚಲನಿನ ಬಡನೆ ಸಮಿಾಪದ ಖಜಾನೆಗೆ ಇರಸಲ್ಮಾಡಿ, ರೀತಿ ಹಾಜರ್ಪಡಿಸಿ, ನೆಟ್ಟನಿಂದ, ಗಳುಗಳನ್ನು ಸಾಗಿಸಿಕೊಂಡು ಹೋಗತಕ್ಕ ಬಗ್ಯೆ ರಹದಾರಿ ಪಡೆಯುತ್ತೇನೆ.

(7) ತೀರ್ವೆ ಪಾವತಿಯಾದ ಗಳುಗಳನ್ನ ನೆಟ್ಟನಿಂದ ನಿಶ್ಕೇಪವಾಗಿ ಸಾಗಿಸಿಕೊಂಡು ಹೋದ ಹೊರತು, ಜಂಗಿ ಯಿಂದ ಯಾವ ಗಳುವನ್ನೂ ಹೊಸದಾಗಿ ತೆಗೆದುಕೊಂಡು ಬಂದು ನೆಟ್ಟನಲ್ಲಿ ಇಡುವದಿಲ್ಲ. ಮತ್ತು ಹಾಸಲು ಪಾವತಿಯಾದ ಗಳುವನ್ನು, ರಹದಾರಿ ಕೊಟ್ಟ ತಾರೀಖು ಲಾಗಾಯ್ತು ಹದಿನೈದು ದಿವಸಗಳ ವಳಗಾಗಿ ನೆಟ್ಟನಿಂದ ಸಾಗಿಸಿಕೊಂಡು ಹೋಗುತ್ತೇನೆ.

(8) ನನ್ನ ಕರಾರ್ ವಾಯಿದೆ ಕಳೆದ ನಂತರ ನನ್ನ ಬಾಬತು ಡಿಪಾಜಿಟ್ ಮೊಬಲಗು ಮೂರು ನೂರು ರೂಪಾಯಿಗಳನ್ನ ಸರ್ಕಾರದಿಂದ ವಾಪಸು ತೆಗದುಕೊಳ್ಳುತ್ತೇನೆ. ಅಥವಾ ಕರಾರಿನ ಕೊನೆ ಮೂರು ತಿಂಗಳುಗಳಲ್ಲಿ ನನ್ನಿಂದ ಬರಬೇಕಾಗುವಮೊಬಲಗ್ಯಾಗಿ ಸದರೀ ಡಿಪಾಜಿಟ್ ಮೊಬಲಗನ್ನ ಸರ್ಕಾರದವರು ಉತ್ತರ ಹಾಕಿಕೊಳ್ಳಬಹುದು.

(9) ನನ್ನಿಂದ ಅಥವಾ ನನ್ನ ಕಡೆ ಜನಗಳಿಂದ ಯಾವ ಕಾರಣದಿಂದಲಾಗಲಿ ಸರ್ಕಾರಕ್ಕೆ ಏನಾದರೂ ನಷ್ಟ ಸಂಭವಿಸಿದಲ್ಲಿ ಅದಕ್ಕೆ ನಾನು ಜವಾಬ್ ಮಾಡತಕ್ಕವನು.

(10) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ಉಲ್ಲಂಘಿಸಿ ನಡೆದಲ್ಲಿ ಡೆಪ್ಯೂಟಿ ಕಮ್ಮಿಷನರವರು ನನ್ನ ಕರಾರನ್ನ ರದ್ದುಮಾಡಿ ನಾನು ಜಮಾಯಿಸಿ ಇಟ್ಟುಕೊಂಡಿರುವ ಗಳುಗಳನ್ನೂ ಜಪ್ತಿ ಮಾಡಬಹುದು. ಮತ್ತು ಅಂಥಾ ತಪ್ಪುತಕ್ಕಾಗಿ ಮೇಲ್ಕಂಡ ಸೆಕ್ಯೂರಿಟಿ ಮೊಬಲಗನ್ನ ಪೂರ್ತಿಯಾಗಿಯಾಗಲಿ ಆ ಪೈಕಿ ಒಂದು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಕೊಡಲುಳ್ಳವನಲ್ಲದೆ ಕ್ರಿಮಿನಲ್ ತರಫ್ ವಿಚಾರಣೆಗೂ ಸಹ ಗುರಿಯಾಗುತ್ತೇನೆ.

ಬಿ. ರಾಮುಸ್ವಾಮಯ್ಯರ್,
ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್.

ಮೈಸೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಮಂಜೀರಾಬಾದ್ ತಾಲ್ಲೂಕು ಬಳಗೊಡು ಗ್ರಾಮದಲ್ಲಿರುವ ಅಕ್ಕಸಾಲೆ ನಾಗಾಚಾರಿ ಮಗ ವೀರಾಚಾರಿ ವಿಷಯದಲ್ಲಿ—

ಸ್ರ 1895—96ನೇ ಇಸವಿ ದಿವಾಳಿ ಕೇಸಿ ನಂಬರು 217.

ಹುಕುಂ.

ಮೇಲ್ಕಂಡ ವೀರಾಚಾರಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ರೂಬರೂ ಅರ್ಜೀದಾರನಾದ ವೀರಾಚಾರಿ ಪರವಾಗಿ ಅಡ್ವೊಕೇಟ್ ಮಸ್ಟರ್ ರಾಘವಾಚಾರ್ರು ಮತ್ತು ಸದರೀ ಯವನ ಲೇಣೇದಾರ್ರಾದ ತರಫ್ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಅಬ್ದುಲ್‌ವಲಿಕಸಾಬ್, 2ನೇ ಉಂಪಾಜಿ ದೇವ್ರೋಜಿ, 3ನೇ ಮುಡವಾಳಪ್ಪ 4ನೇ ವೆಂಕಟಾಚಲಶೆಟ್ಟಿ.

ಸಿವಿಲ್ ಪ್ರೊಸೀಜ್ಯರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ವೀರಾಚಾರಿ ಹೊಂದುವದಕ್ಕೆ ಹೆಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ

ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ತ್ರರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1896ನೇ ಇಸವಿ ಮಾರ್ಚಿ 18ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತನಿನಿ ಕೊಡಲ್ಪಟ್ಟತು.

ಸಾಲದಪಟ್ಟಿ.

ನಂಬರು	ಲೇಹೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರಗಳ ವಾಸಸ್ಥಳ.	ಹೊಣಲಗ್ಗ	ಯಾವಾಗ ದೇಣಿ ಉಂಟಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರು ಇದ್ದರೆ.	ಷರಾ.
1	ಮಂಜೀರಾಬಾದ್ ತಾಲ್ಲೂಕು ಬೆಳಗೊಡುನಲ್ಲಿರುವ ಅಬ್ದುಲ್ ಮಲಿಕ್‌ಸಾಬ್	266—12—0		ಡಿಕ್ರಿ ಬಾಬತು	
2	ಉಂಮಾಜಿ—ದೇವೋಜಿ	171—0—0		ಡಿಟೋ	

ದಿವಾಳಿಯಾದ ಡಿಕ್ರಿದೇಹೇದಾರ ಮೈಸೂರು ಹಳೆ ಅಗ್ರಹಾರದಲ್ಲಿರುವ ತಿರುಚನಾಪಲ್ಲಿ ಜಿಲ್ಲಾ ಕರವತ್ತೂರು ಸ್ಥಳದ

ಆನಂತರಾಮಯ್ಯನ ಮಗ ರಾಮಸ್ವಾಮಯ್ಯನ ವಿಷಯದಲ್ಲಿ—

ಸ್ಯ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 208.

ಹುಕುಂ.

ಮೇಲ್ಕಂಡ ರಾಮಸ್ವಾಮಯ್ಯನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಆಂಕವು ಈ ಕೋರ್ಟು ರೂಬರು ಅರ್ಜಿದಾರನಾದ ರಾಮಸ್ವಾಮಯ್ಯನ ಪರವಾಗಿ ಫಸ್ಟ್‌ಗ್ರೇಡ್ ಪ್ಲೀಡರ್ ಸೆ॥ ವೆಂಕಟಸುಬ್ಬಯ್ಯನವರನ್ನು ಮತ್ತು ಸದರೀಯವರ ಲೇಹೇದಾರ್ರಾದ ನೇ ವೆಂಕಟರಾಮಯ್ಯ ಖುದ್ದು ಹಾಜರು ಇವರಿಗೂ ದರ್ಯಾಫ್ತ್ ಮಾಡಲ್ಪಟ್ಟತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಹೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಮೈಸೂರಲ್ಲಿರುವ ಗೋವಿಂದಜಟ್ಟಪ್ಪ, 2ನೇ ವಿಜಂಟಿ ಅಪ್ಪೂರಾವ್, 3ನೇ ಅಳಸಿಂಗಾಚಾರ್ರು, 4ನೇ ಕಾಂಗಳಟ್ಟರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ರಾಮಸ್ವಾಮಯ್ಯನು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾತ್ತವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ತ್ರರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1896ನೇ ಇಸವಿ ಮಾರ್ಚಿ ತಿಂಗಳ 18ನೇ ತಾರೀಖಿನಲ್ಲಿ ಈ ಕೋರ್ಟ್‌ಮೊಹರ್ ನಮ್ಮ ದಸ್ತಖತನಿನಿ ಕೊಡಲ್ಪಟ್ಟತು.

ಸಾಲದಪಟ್ಟಿ.

ನಂಬರು	ಲೇಹೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರಗಳ ವಾಸಸ್ಥಳ.	ಹೊಣಲಗ್ಗ.	ಯಾವಾಗ ದೇಣಿ ಉಂಟಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ಮಂಡಿ ಮೊಹಲಾದಲ್ಲಿರುವ ಗೋವಿಂದ ಜಟ್ಟಪ್ಪ	23—6—0		ಡಿಕ್ರಿ ಬಾಬತು.	

ಎಸ್. ಆರ್. ಸುಬ್ಬರಾಯ ಅಯ್ಯರ್,
ಸಬ್ ಜಡ್ಜ್.

ಫ್ರೈಚರಾಕ್ಸ್ ಸಬ್ ಡಿವಿಜ್ಞ.

ಪ್ರಸಿದ್ಧ ಪತ್ರಿಕೆ.

ತಾರೀಖು 2ನೇ ಏಪ್ರಿಲ್ 1896.

1. ಕೃಷ್ಣರಾಜಪೇಟೆ ತಾಲ್ಲೂಕು ಕಲ್ಲಹಳ್ಳಿ ಬಳಿ ಹೇಮಾವತಿ ನದಿಗೆ ಅಣಿಕಟ್ಟು ಕಟ್ಟಲು ಕಾಂಗ್ರಾರಿ ಉದ್ದಿಶ್ಯ 96ನೇ ಇಸವಿ ಏಪ್ರಿಲ್ ಮಾಹೆ 17ನೇ ತಾರೀಖು ವರವಿಗೂ ದರಖಾಸ್ತುಗಳು ಫ್ರೈಚರಾಕ್ಸ್ ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್‌ಸಾಹೇಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಪೈತ್ತವನ್ನ ಕಾಣಿಸಲ್ಪಟ್ಟಿರುತ್ತದೆ. ಇದುನಿಷ್ಕರ್ಷೆಯಾದದ್ದಾಗಿರುವದಿಲ್ಲ. ಕಾಂಮಗಾರಿಯು 1897ನೇ ಇಸವಿ ಜೂನ್ ತಿಂಗಳು ಅಖೈರೊಳಗಾಗಿ ಪೂರೈಸತಕ್ಕದ್ದು.